ಪಿ.ಜೆ. ರಾಘವೇಂದ್ರ, ಮೈಸೂರು
ಕೊರೊನಾ ರೋಗಿಯನ್ನು ಸ್ಟುಡಿಯೊ ಒಳಗೆ ಕೂರಿಸಿ ಯಾವುದೇ ವಾಹಿನಿ ಸಂದರ್ಶನ ನಡೆಸಲಿಲ್ಲವೇಕೆ?



ಏಕೆಂದರೆ ನಮ್ಮ ವಾಹಿನಿಗಳಲ್ಲಿ ಮೆಂಟಲ್‌ಗಳು ಸಿಕ್ಕಾರೇ ವಿನಹ ಎಕ್ಸ್‌ಪೆರಿಮೆಂಟಲ್‌ಗಳು ಸಿಗುವುದಿಲ್ಲ.

ರಮೇಶ್, ಹನುಮನಾಳು
ಒಮ್ಮೊಮ್ಮೆ ಸುಧಾ, ಪೋಸ್ಟಾಫೀಸ್ & ಪೋಸ್ಟ್‌ಮ್ಯಾನ್ ನೋಡಿದಾಗ ನಿಮ್ಮ ನೆನಪಾಗುತ್ತಲ್ಲಾ ಮಿ.ರಾಮ್?
ತಿಳಿಯಿತು. ನಿಮಗೆ ಸಲ್ಲಬೇಕಾದ ಬಹುಮಾನದ ಹಣವನ್ನು ಶೀಘ್ರವೇ ಕಳುಹಿಸುತ್ತೇವೆ.

ಕುಮಾರ್, ಮೈಸೂರು
ಕುಡಿದು ಲೂಸ್‌ಲೂಸಾಗಿ ಆಡುವವರಿಗೆ ಟೈಟ್ ಆಗಿದ್ದಾರೆ ಎನ್ನುವುದೇಕೆ?
ಆರ್ಥಿಕ ಮುಗ್ಗಟ್ಟು, ಸಾಂಸಾರಿಕ ಇಕ್ಕಟ್ಟುಗಳ ಟೈಟ್ ಪರಿಸ್ಥಿತಿ ತಲುಪಿರುತ್ತಾರಲ್ಲ!

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಗಗನಸಖಿಯರು ನಕ್ಕರೆ ಎಲ್ಲರಿಗೂ ಇಷ್ಟ. ಆ ನಗುವಿನ ಶಕ್ತಿಯ ಗುಟ್ಟೇನು?



ಶಿಸ್ತು, ಶಿಷ್ಟತೆ.

ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ
ರಾಮ್‌ಜಿ, ಸಾವನ್ನು ಕನಸಿನಲ್ಲಿ ಕಾಣುವಾಸೆ. ಎಂಗ್ಗೆ?
ಪ್ರತಿ ರಾತ್ರಿ ಮಲಗುವ ಮುನ್ನ ತಪ್ಪದೆ ಕ್ರೈಮ್ ಸೀರಿಯಲ್ ನೋಡಿ.

ಬೂಕನಕೆರೆ ವಿಜೇಂದ್ರ, ಮೈಸೂರು
ಇತ್ತೀಚೆಗೆ ಪ್ರಾಣಿಗಳು ಸಹ ಮೋಸ ಮಾಡಲು ಕಲಿತುಕೊಂಡಿವೆಯಲ್ಲಾ...?
ಮಾಲಿಕನನ್ನು ಅನುಕರಿಸುವುದು ಪ್ರಾಣಿಗಳ ಗುಣ.

ಬಾ.ರಂ. ಸುರೇಶ್, ಶಿವಮೊಗ್ಗ
ದೇವರು ಇದ್ದಿದ್ದರೆ ಕೊರೊನಾದಂತಹ ಭಯಂಕರ ರೋಗಗಳು ಬರುತ್ತಿದ್ದವೆ? ಅವುಗಳಿಂದ ಜನ ಸಾಯುತ್ತಿದ್ದರೆ?
ವೈದ್ಯಕೀಯ, ಮಸಣದ ಕೆಲಸಗಾರರ ಖಾಸಾ ದೇವರೇ ತನ್ನ ಭಕ್ತರ ಹಿತಕ್ಕಾಗಿ ಈ ವ್ಯವಸ್ಥೆ ಮಾಡುವವನಂತೆ.

ಮಹಾವೀರ ಕಾಸರ, ಶಿವಮೊಗ್ಗ
ರೈತ ಆತ್ಮಹತ್ಯೆ ಮಾಡಿಕೊಂಡರೆ ಪರಿಹಾರ ಉಂಟು. ಕುಡಿಯಲು ಸಿಗದೆ ಕುಡುಕ ಆತ್ಮಹತ್ಯೆ ಮಾಡಿಕೊಂಡರೆ?
ಅವನ ಸಾವೇ ಅವನ ಕುಟುಂಬಕ್ಕೆ ದೊಡ್ಡ ಸಮಸ್ಯೆಯ ಪರಿಹಾರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ತೆಪ್ಪಗೆ ಮನೆಯಲ್ಲಿ ಇರಿ. ಹೊರಗೆ ಬಂದರೆ ನನ್ನ ಜೊತೆ ಬನ್ನಿ ಅಂತ ಯಮರಾಜ ಕರೆದರೆ?
ನೀನು ಬಾ, ನಾವು ಪಡಖಾನೇಲಿರ್‍ತಿವಿ ಎನ್ನುತ್ತಾ ಭರದಿಂದ ಸಾಗುವವರಿದ್ದಾರೆ.

ಶಾಂತರಾಜು ಎಸ್. ಊರಿಲ್ಲ
ಸ್ವಾಮೀಜಿಗಳು ತಮ್ಮ ಪಾದವನ್ನು ಇಡದ ಯಾತ್ರೆ ಯಾವುದಿದೆ?
ಭುಜಗಳ ಮೇಲೆಯೇ ಸವಾರಿ ಮಾಡುವ ಪಲ್ಲಕ್ಕಿ ಯಾತ್ರೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಫಿಲ್ಮ್ ಸ್ಟಾರ್; ಸ್ಪೋರ್ಟ್ಸ್ ಸ್ಟಾರ್‌ಗಳಿದ್ದಾರೆ. ಪೊಲಿಟಿಕಲ್ ಸ್ಟಾರ್ ಏಕೆ ಇಲ್ಲ?
ಗ್ರಹಗಳು, ಉಲ್ಕೆಗಳು, ಧೂಮಕೇತುಗಳನ್ನು ಸ್ಟಾರ್ ಎಂದು ಕರೆದರೆ ತಪ್ಪಾಗುತ್ತದೆ.

ಆ. ಮೃತ್ಯುಂಜಯ, ಪಾಂಡವಪುರ
ಹೆಣ್ಣು ಹೆಣ್ಣಿಗೆ ಶತ್ರು ಆದರೆ ಗಂಡು ಗಂಡಿಗೆ ಏನು?
ಮಚ್ಚಾ, ಮಗಾ, ಡೂಡ್, ಗ್ಲಾಸ್‌ಮೇಟ್...

ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣು ಶೃಂಗಾರವಿಲ್ಲದೆ ಹೊರಬರುವುದು ಯಾವ ಸಮಯದಲ್ಲಿ?
ಹಲ್ಲಿಯೋ, ಜಿರಳೆಯೋ ಥೊಪ್ಪನೆ ಬಿದ್ದಾಗ.

## ಬಹುಮಾನಿತ ಪ್ರಶ್ನೆ

ಗಂಗಾಚಾರಿ, ಬೆಂಗಳೂರು
ಕಪ್ಪುಬಣ್ಣದ ಬಗ್ಗೆ ಕೀಳರಿಮೆ ಮೆಟ್ಟಿ ಸಾಧಿಸುವಳ ಪಾತ್ರಕ್ಕೆ ಬಿಳಿಯಳನ್ನು ಆರಿಸಿ ಕಪ್ಪು ಮೇಕಪ್ ಮಾಡುವುದೇಕೆ?
ನಿರ್ಮಾಪಕರು ಮೇಕಪ್ಪು ಅನ್ನುವುದನ್ನು ಮೇಕ್ ಕಪ್ಪು ಎಂದು ಅರ್ಥ ಮಾಡಿಕೊಂಡುದರ ಪರಿಣಾಮವಂತೆ.

ವಿ. ಹಮೀದ್, ವಿಟ್ಲ
ಗೊರಕೆ ಹೊಡೆಯುವಾತ ತನಗೆ ಇಷ್ಟವೆಂದು ಇಲ್ಲೊಬ್ಬ ಪತ್ನಿ ಹೇಳುತ್ತಿದ್ದಾಳಲ್ಲಾ...?
ತಪ್ಪು ತಿಳಿದಿದ್ದೀರಿ. ಅವಳು ಹೇಳಿದ್ದು ಸೌಂಡ್ ಪಾರ್ಟಿ ಇಷ್ಟ ಅಂತ.

ವಿ. ಹೇಮಂತಕುಮಾರ್, ಬೆಂಗಳೂರು
ಯೋಗ್ಯತೆ ಇಲ್ಲದವರ ಬಗ್ಗೆ ಯೋಚನೆ ಮಾಡಬಾರದಂತೆ. ಹೌದಾ ಸರ್?
ನಿಜ. ಪಾರ್ಲಿಮೆಂಟಿನಲ್ಲಿರುವವರ ಬಗ್ಗೆ ಯೋಚಿಸುವುದು ವ್ಯರ್ಥ.

ವಿಜಯಾ ಬಿದರಹಳ್ಳಿ, ಹಿರೇಹಡಗಲಿ
ಸತಿಗೆ ಪತಿಯೇ ದೇವರೆನ್ನುವರು. ಅಂದಮೇಲೆ ಪತಿಗೆ ಸತಿ ಏನಾಗಬೇಕು?



ಧರ್ಮದರ್ಶಿ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಪುಟಗಟ್ಟಳೆ ಜಾಹೀರಾತನ್ನು ನೇತಾರರ ಜನ್ಮದಿನದಂದು ನೀಡುವ ಚೇಲಾಗಳು ಅವರ ವಿವಾಹವಾರ್ಷಿಕೋತ್ಸವದಂದು ಏಕೆ ನೀಡುವುದಿಲ್ಲ?
ಹುಟ್ಟಿದಹಬ್ಬ ಒಂದೇ ಇರುತ್ತದೆ. ವಿವಾಹದ್ದ ಖಚಿತ ಲೆಕ್ಕ ಸಿಗುವುದಿಲ್ಲವಂತೆ.

ನರಸಿಂಹಾರೆಡ್ಡಿ ಯಂಕಮೊಳ, ಸೇಡಂ
ಅತ್ತೆಗೊಂದು ಕಾಲ ಸೊಸೆಗೊಂದು ಕಾಲ. ಗಂಡ, ಮಾವನಿಗೆ?
ನನಗೊಂದು ಕಾಲು (ಕ್ವಾರ್ಟ್ರು), ನಿನಗೊಂದು ಕಾಲು ಎನ್ನುತ್ತಾ ಗುಪ್ತವಾಗಿ ಹೊರಹೊರಡುವ ಕಾಲ.

■ ರಾಮ್